

‘ಎಲ್ಲವೂ ಕೈಗೆ ಹತ್ತಿದೆ–ಆದರೆ ಏನನ್ನೂ ಅರಗಿಸಿಕೊಂಡಿಲ್ಲ... ಏಕೆ ಗೊತ್ತೆ–ಪಠ್ಯಗಳನ್ನು ಓದುವಾಗ ಆಳಕ್ಕಿಳಿಯದೆ ಬರೀ ಓದುತ್ತಾ ಹೋಗುತ್ತೇನೆ, ಇನ್ನೊಂದು ಬಾರಿ ಓದಿದಾಗ ಅರಗಿಸಿಕೊಳ್ಳಬಲ್ಲೆ ಎಂದು. ಆದರೆ ಇದೊಂದು ಚಕ್ರವಾಗಿಬಿಟ್ಟಿದೆ. ಇದರಿಂದ ಆದಷ್ಟು ಬೇಗ ಪಾರಾಗಬೇಕು.’

ಸೃಷ್ಟಿಸಿಕೊಳ್ಳುತ್ತೇನೆ. ಆ ನಿಶ್ಚಯಗಳು ಇವು: ಹಳಹಳಿಕೆ ಆರೋಗ್ಯಕಾರಿಯಲ್ಲ. ಸ.ಯು.ಸ. ಸಂಘಟನೆಯನ್ನು ಬಲಗೊಳಿಸಬೇಕಾದ್ದು ನಮ್ಮೆಲ್ಲರ ಜವಾಬ್ದಾರಿ. ನನ್ನ ಗದ್ಯದಲ್ಲಿನ ಏಕತಾನತೆಯ ಅರಿವು ಈಚೆಗೆ ಆಗುತ್ತಿದೆ. ಅದರಿಂದ ಹೊರಗಡೆ ಬರುವ ಪ್ರಯತ್ನ ಆಲೋಚನೆಯಲ್ಲಿದೆ.’

‘ಮಾರ್ಕ್ಸ್‌ವಾದ, ಲೋಹಿಯಾವಾದದ ಬಗೆಗೆ ತಾಕಲಾಟ’ದಲ್ಲಿದ್ದ ಡಿ.ಆರ್. ‘ಸಂಘಟನೆ–ಚಳವಳಿ–ಸಿದ್ಧಾಂತ’ ಎಂಬ ಸಾಲಿನ ಕೆಳಗೆ ಬರೆದಿರುವ ಟಿಪ್ಪಣಿ: ‘ನಾನು ಈಗ ಪ್ರತಿಪಾದಿಸಲಿರುವ ಸಿದ್ಧಾಂತ ಕೂಡ ಅಪೂರ್ಣ; ಸಂಘಟನೆ ಮತ್ತು ಚಳವಳಿಯಂತೂ ಅನೀಮಿಯಾ ರೋಗದಿಂದ ನರಳುತ್ತಿದೆ. ನಲ್ಲಿ, ವಿದ್ಯುಚ್ಛಕ್ತಿ... ಈ ಯಾವುದಕ್ಕೂ ಸಂಬಂಧಪಡದ ಮೂವತ್ತು ಕೋಟಿ ಭಾರತೀಯರಿಗಾಗಿ ಲೋಹಿಯಾ.’ ಲೋಹಿಯಾರ ‘ಇತಿಹಾಸ ಚಕ್ರ’ ಹಾಗೂ ಪ್ರಬಂಧಗಳನ್ನು ಓದಿದ ಡಿ.ಆರ್.ಗೆ, ‘ನಾನು ವಾಸ್ತವವಾಗಿ ಲೋಹಿಯಾ ವಿಚಾರಧಾರೆಯ ಪ್ರಭಾವಕ್ಕೆ ಒಳಗಾಗಿದ್ದೇನೆ ಎಂಬುದೇನೋ ನಿಜ’ ಎನ್ನಿಸುತ್ತದೆ. ‘ಲೋಹಿಯಾರ ‘ಮಾರ್ಕ್ಸ್ ಗಾಂಧಿ ಸಮಾಜವಾದ’ ಪುಸ್ತಕ ಮತ್ತೆ ಲೋಹಿಯಾ ಕಂಬಕ್ಕೆ ನನ್ನ ಕಟ್ಟಿತು’ ಎನ್ನುವ ಡಿ.ಆರ್. ಕೆಲವೊಮ್ಮೆ ಕಮ್ಯುನಿಸಂ ಕಡೆಗೆ ವಾಲುತ್ತಲೇ ಹೀಗೆಂದುಕೊಳ್ಳುತ್ತಾರೆ: ‘ಕಮ್ಯುನಿಸ್ಟನಾದರೆ ಜೀವನದ ಎಷ್ಟೋ ನಿಗೂಢ ಬಾಗಿಲುಗಳು ಶಾಶ್ವತವಾಗಿ ಮುಚ್ಚಿ ಹೋಗಿಬಿಡಬಹುದೇನೋ ಎಂಬ ಭಯ ನನ್ನನ್ನು ಕಮ್ಯುನಿಸ್ಟ್ ಆಗಲು ಬಿಟ್ಟುಕೊಟ್ಟಿಲ್ಲ.’

ಎಂ.ಎ. ವಿದ್ಯಾರ್ಥಿಯಾಗಿದ್ದಾಗಲೇ ಬರವಣಿಗೆಯ ಬಗ್ಗೆ ಹೈ ಸ್ಟ್ಯಾಂಡರ್ಡ್ ಇರಿಸಿಕೊಂಡಿದ್ದ ಡಿ.ಆರ್.ಗೆ ಪರೀಕ್ಷೆಯಲ್ಲಿ ಆ ಮಟ್ಟ ತಲುಪಲಾಗದಿರುವ ಬಗ್ಗೆ ವಿಷಾದ ಕಾಡುತ್ತಲೇ ಇರುತ್ತದೆ. ‘ನೆನಪಿನ ಶಕ್ತಿ ಕೈ ಕೊಡುತ್ತಿರುವ’, ‘ನೆನಪು ತಟ್ಟಾಡುತ್ತಿರುವ’ ಆತಂಕ ಮತ್ತೆ ಮತ್ತೆ ಸುಳಿಯುತ್ತದೆ. ‘ಆತುರದಿಂದ ಬರೆದದ್ದರಿಂದ ಒಂದು ಪ್ರಶ್ನೆಗೆ ಪುಂಡರೀಕ–ಮಹಾಶ್ವೇತೆಯರ ಸಂದರ್ಶನ ಕೇಳಿದ್ದರೆ, ನಾನು ಕಾದಂಬರಿ–ಚಂದ್ರಾಪೀಡರ ಸಂದರ್ಶನ ಬರೆದೆ.